# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ

## ಪತ್ರಿಕಾ ಪ್ರಕಟಣೆ

### ವಿಟಿಯು ತಾಂತ್ರಿಕ ನಿಘಂಟು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು(ವಿಟಿಯು) "ತಾಂತ್ರಿಕ ನಿಘಂಟು" (ತಾಂತ್ರಿಕ ಪದ ವಿವರಣಾತ್ಮಕ ಕೋಶ) ಪ್ರಕಟಿಸುವ ಉದ್ದೇಶದೊಂದಿಗೆ ಈಗಾಗಲೇ ಸಂಬಂಧಿಸಿದ ಕೆಲಸವನ್ನು ಪ್ರಾರಂಭಿಸಿದೆ. ಇಂಜಿನಿಯರಿಂಗ/ಡಿಪ್ಲೊಮಾ/ಐಟಿಐ ನಂತಹ ತಾಂತ್ರಿಕ ಕೋರ್ಸಗಳನ್ನು ಓದಲು ಬಯಸುವ ಗ್ರಾಮೀಣ ಹಾಗೂ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಇಂಗ್ಲೀಷ ಭಾಷೆಯ ತಾಂತ್ರಿಕ ಪದಗಳನ್ನು ಅರ್ಥೈಯಿಸಿಕೊಳ್ಳುವುದು ಕಠಿಣವೆನಿಸುತ್ತದೆ. ಹಾಗಾಗಿ ಇಂಗ್ಲೀಷನಲ್ಲಿರುವ ಕಠಿಣ ಶಬ್ದಗಳ ಅರ್ಥವನ್ನು ಕನ್ನಡದಲ್ಲಿ ಸುಲಭವಾಗಿ ವಿವರಿಸುವುದು ತುಂಬಾ ಅವಶ್ಯವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ -೨೦೨೦ ಸಹ ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣವನ್ನು ನೀಡಲು ಪ್ರೊತ್ಸಾಹಿಸುತ್ತಿದೆ. ಹಾಗಾಗಿ ಕನ್ನಡದಲ್ಲಿ ಇಂಜಿನಿಯರಿಂಗ ಕೋರ್ಸನ್ನು ಕಲಿಸುವ ಹಾಗೂ ಕನ್ನಡ ಭಾಷೆಯನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಮಾನ್ಯ ಕುಲಪತಿಗಳು ಕನ್ನಡದಲ್ಲಿ ತಾಂತ್ರಿಕ ನಿಘಂಟುನ್ನು ಹೊರತರಲು ನಿರ್ಧರಿಸಿದ್ದಾರೆ.

ಸದರಿ ನಿಘಂಟು ಕನ್ನಡ ಮಾಧ್ಯಮದಲ್ಲಿ ಓದಿದ ವಿದಾರ್ಥಿಗಳಿಗೆ, ಪ್ರಾಧ್ಯಾಪಕರಿಗೆ, ಸರ್ಕಾರಿ/ಖಾಸಗಿ ಕಛೇರಿಗಳ ಉದ್ಯೋಗಿಗಳಿಗೆ, ಲೇಖಕ/ ಪುಸ್ತಕ ಬರಹಗಾರರಿಗೆ ಹಾಗೂ ಇನ್ನಿತರ ಆಸಕ್ತ ತಾಂತ್ರಿಕ ಓದುಗರಿಗೆ ಉಪಯೋಗವಾಗುವುದು. ಇದರ ರಚನೆಗೆ ಸಂಬಂಧಿಸಿದ ಕೆಲಸವು ಈಗಾಗಲೆ ವಿಟಿಯು ಪ್ರಸಾರಾಂಗದ ಮುಖಾಂತರ ಪ್ರಾರಂಭಿಸಲಾಗಿದ್ದು, ನಿಘಂಟನ್ನು ಇನ್ನೂ ವಿವರಣಾತ್ಮಕವಾಗಿ, ಸಮಗ್ರವಾಗಿ ಹಾಗೂ ಗುಣಾತ್ಮಕವಾಗಿ ನಿಗದಿತ ಸಮಯದೊಳಗೆ ರಚಿಸುವ ಉದ್ದೇಶದಿಂದ ನಿಘಂಟು ರಚನೆಯ ಕೆಲಸದಲ್ಲಿ ಆಸಕ್ತಿವುಳ್ಳವರು ಭಾಗವಹಿಸಲು ಅರ್ಜಿ ಸಲ್ಲಿಸಬಹುದು.

ಇಚ್ಚೆಯುಳ್ಳ ನಿವೃತ್ತರು, ಉದ್ಯಮಿಗಳು, ಇಂಜಿನಿಯರಿಂಗ/ಡಿಪ್ಲೊಮಾ/ಐಟಿಐ ಕಾಲೇಜುಗಳ ಪ್ರಾಧ್ಯಾಪಕರು, ತಾಂತ್ರಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರು ಮತ್ತು ಇನ್ನುಳಿದ ಆಸಕ್ತರು ಸದರಿ ಪ್ರಕಟಣೆಯ ಹತ್ತು ದಿನಗಳ ಒಳಗೆ ಗೂಗಲ್ ಲಿಂಕ್ **(https://tinyurl.com/VTUDictionary)** ಮುಖಾಂತರ ನೊಂದಾಯಿಸಿಕೊಳ್ಳಬಹುದು ಎಂದು ಮಾನ್ಯ ಕುಲಸಚಿವರು ಈ ಮೂಲಕ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ವಿತಾವಿ ಪ್ರಸಾರಾಂಗದ ನಿರ್ದೇಶಕರನ್ನು ಸಂಪರ್ಕಿಸಬಹುದು **(+919986066048 / +919742032219/ +919845768417/0831-2498155).**

ಕುಲಸಚಿವರು